**ಓ ಎಸ್ ನಂಃ 577-14**

**ಪಿ. ಡಬ್ಲ್ಯೂ ಃ 2**

**ದಿಃ 06-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಸ್.ಆರ್.ಎಸ್ ವಕೀಲರಿಂದ ಃ**

ದಾವಾ ಸ್ವತ್ತುಗಳನ್ನು ನಮ್ಮ ತಂದೆ ಇದ್ದಾಗಲೇ ಬೋಗ್ಯ ಮತ್ತು ಪರಭಾರೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಬದುಕಿದ್ದಾಗಲೇ ಅವರು ಮತ್ತು ಪ್ರತಿವಾದಿಗಳ ತಂದೆ ಇವರ ನಡುವೆ ಆಸ್ತಿಗಳ ವಿಭಾಗವಾಗಿತ್ತು ಎಂದರೆ ಸರಿಯಲ್ಲ. ವಿಭಾಗ ಆದ ವಿಚಾರ ನಮ್ಮ ತಂದೆ ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ದಿನಾಂಕಃ **8.3.1985** ರಲ್ಲಿ ನಮ್ಮ ತಂದೆ ಎಲ್ಲ ಸ್ವತ್ತುಗಳನ್ನು ರಾಮಲಿಂಗಯ್ಯ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಪೈಕಿ ಕೆಲವು ಸ್ವತ್ತುಗಳನ್ನು ದಿನಾಂಕ ಃ **30.8.1983** ರಂದು ಬೋಗ್ಯ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಹಾಕುವ ಮೊದಲು ದಿನಾಂಕ ಃ **2.1.2006** ರಂದು ಪ್ರತಿವಾದಿಗಳು ದಾವಾ ಸ್ವತ್ತುಗಳನ್ನು ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ ಃ **2.1.2006** ರ ನಂತರ ನಾನು ಹಾಜರುಪಡಿಸಿದ ದಾಖಲೆಗಳಂತೆ ದಾವಾ ಸ್ವತ್ತುಗಳು ಪ್ರತಿವಾದಿಗಳ ಹೆಸರಿನಲ್ಲಿ ಬರುತ್ತಿದ್ದವು ಎಂದರೆ ಸರಿಯಲ್ಲ. ಅದರಂತೆ ದಾವಾ ಸ್ವತ್ತುಗಳ ಮೇಲೆ ಅವರವರ ಅನುಭವ ಇತ್ತು ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಕೊಂಡು **1** ವರ್ಷವಾಗಿದೆ. ಅವರ ಮರಣ ಪ್ರಮಾಣಪತ್ರವನ್ನು ಕೊಟ್ಟಿದ್ದೇನೆ.

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. **2006** ರ ಪೆಬ್ರವರಿ ತಿಂಗಳಿನಲ್ಲಿ ಪ್ರತಿವಾದಿಗಳು ಖಾತೆ ಮಾಡಿಕೊಂಡಿದ್ದಾರೆ ಎಂದು ಗೊತ್ತಾಯಿತು. ಖಾತೆ ಬದಲಾವಣೆ ಆಗಬೇಕಾದರೆ ನೋಂದಾಯಿತ ದಾಖಲೆಗಳು ಇರಬೇಕು ಎಂದರೆ ಸರಿಯಲ್ಲ. ಅವುಗಳು ಇಲ್ಲದೆ ಖಾತೆ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಖಾತೆ ಮಾಡಿಸಿಕೊಂಡಿರುವುದು ಸರಿ ಇಲ್ಲ ಎಂದು ತಹಶೀಲ್ದಾರ್ ಅಥವಾ ಎ.ಸಿ ರವರ ಮುಂದೆ ಅಪೀಲು ಮಾಡಿಲ್ಲ. **2007** ರ ಮಾರ್ಚ್ ತಿಂಗಳಿನಲ್ಲಿ ಖಾತೆ ಬದಲಾವಣೆ ಮಾಡಿದ್ದನ್ನು ಪ್ರಶ್ನಿಸಿ ನಾನು ತಹಶೀಲ್ದಾರ್ ಇವರಿಗೆ ಅರ್ಜಿ ಕೊಟ್ಟಿದ್ದೆನು. ಅದರ ಮೇಲೆ ಏನು ಆದೇಶವಾಗಿದೆ ಎಂದು ನನಗೆ ಗೊತ್ತಿಲ್ಲ.

ದಿನಾಂಕ ಃ **16.4.2007** ರಲ್ಲಿ ನಾನು ಪ್ರತಿವಾದಿಗಳ ವಿರುದ್ದ ಒಂದು ದೂರು ಕೊಟ್ಟಿದ್ದೆನು ಎಂದರೆ ಸರಿಯಲ್ಲ. ನಾನು ವಾದಪತ್ರದಲ್ಲಿ ದೂರು ಕೊಟ್ಟಿರುವುದಾಗಿ ಬರೆಯಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ನಮ್ಮ ಸ್ವಾಧೀನದಲ್ಲಿವೆ ಎಂದು ತೋರಿಸಲು ಯಾವುದೇ ದಾಖಲೆ

ಕೊಟ್ಟಿಲ್ಲ. ಆರ್ ಟಿ ಸಿ ಗಳನ್ನು ನಾನು ದಾವೆ ಹಾಕಿದ ನಂತರ ಪಡೆದಿದ್ದೇನೆ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. 2006 ರಿಂದ ಇಲ್ಲಿಯವರೆಗೆ ದಾವಾ ಸ್ವತ್ತುಗಳ ಆರ್ ಟಿ ಸಿ ಗಳು ಪ್ರತಿವಾದಿ ಹೆಸರಿನಲ್ಲಿ ಬರುತ್ತಿವೆ ಎಂದರೆ ನನಗೆ ಗೊತ್ತಿಲ್ಲ. ದಾಖಲೆಗಳನ್ನು ನೋಡಿದ ನಂತರ ಅವುಗಳನ್ನು ಪ್ರಶ್ನಿಸಿ ಅಪೀಲು ಮಾಡಿರುವುದಿಲ್ಲ. ದಾವಾ ಸ್ವತ್ತುಗಳು ಈಗ ತುಂಬಾ ಬೆಲೆ ಬಾಳುವುದರಿಂದ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ನಮ್ಮ ತಂದೆ ಯಾರಿಗೆ ಬೋಗ್ಯ ಮಾಡಿದ್ದರೋ ಆ ಬೋಗ್ಯಕ್ಕೆ ಒಳಪಟ್ಟು ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ನನ್ನ ಸಹೋದರರು ಮತ್ತು ನಾನು ಓದು ಬರಹ ಗೊತ್ತಿಲ್ಲದರಿರುತ್ತೇವೆ. ನನ್ನ ಸಹೋದರರಿಗೆ ದಾವೆ ಹಾಕಿರುವುದು ಗೊತ್ತಿಲ್ಲ. ಅವರಿಗೆ ಕ್ರಯಪತ್ರವಾಗಿರುವುದು ಮತ್ತು ಬೋಗ್ಯ ಪತ್ರ ಆಗಿರುವುದು ಗೊತ್ತಿದೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಅವರು ಸುಮ್ಮನಿರುತ್ತಾರೆ ಎಂದರೆ ಸರಿಯಲ್ಲ. ನಾನು ಒಬ್ಬನೇ ಪ್ರತಿವಾದಿಗಳಿಗೆ ತಕರಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಎಷ್ಟು ಭಾಗ ಬರಬೇಕೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ವಿಷಯವಾಗಿ ನಾನು ಊರಿನಲ್ಲಿ ಪಂಚಾಯಿತಿ ಮಾಡಿಸಿ ಭಾಗ ಕೊಡಬೇಕು ಎಂದು ನಾನು ಕೇಳಿಲ್ಲ. ನಮ್ಮ ತಂದೆಯವರಿಗೆ ಸ್ವತ್ತುಗಳಲ್ಲಿ ಯಾವುದೆ ಅಧಿಕಾರ ಇಲ್ಲದ ಕಾರಣ ನಾವು ಪಂಚಾಯಿತಿ ಮಾಡಿ, ಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ. ನಾನು ಪ್ರತಿವಾದಿಗಳನ್ನು ಹೆದರಿಸಿ ದಾವಾ ಆಸ್ತಿಗಳನ್ನು ಹೊಡೆದುಕೊಳ್ಳುವ ಉದ್ದೇಶ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**